# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು– 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ 10/2020–21 ದಿನಾಂಕ: 20.02.2021

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020–21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:–20.02.2021 ರಂದು ಹೊರಮಾವು ಉಪವಿಭಾಗದ ವಾರ್ಡ್–25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಹಾಗೂ ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ರವರ ಆದೇಶದ ಮೇರೆಗೆ ಈ ಮಾಹೇಯ ಸಭೆಯಲ್ಲಿ 2021–22 ನೇ ಸಾಲಿನಲ್ಲಿ ಮಂಡಿಸುವ ಆಯವ್ಯಯಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕರಿಂದ ಸಲಹೆಗಳನ್ನು ಪಡೆಯುವ ಸಲುವಾಗಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

| ಕ್ರಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ರಮೇಶ್ | ಜೆ.ಇ ಹೊರಮಾವು ವಾರ್ಡ–25 | 9739838297 |
| 3 | ಶ್ರೀ.ಚಂದ್ರಶೇಖರ್.ಎ.ಜಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೊರಮಾವು) | 9844587466 |
| 4 | ಶ್ರೀಮತಿ.ಭಾಗ್ಯಲಕ್ಷ್ಮಿ ಎಂ.ಎಸ್ | AEE (Major Roads) | 9480685432 |
| 5 | ಶ್ರೀ.ಶ್ರೀನಿವಾಸ ಮೂರ್ತಿ | JE , E11 Sub-Division (BESCOM) | |
| 6 | ಶ್ರೀ.ಕೋದಂಡ | ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರು | |
| 7 | ಶ್ರೀ.ಹರೀಶ್ | ಕಿರಿಯ ಆರೋಗ್ಯ ಪರಿವೀಕ್ಷಕರು | 8431325214 |
| 8 | ಶ್ರೀ.ಸತೀಶ್‌ಕುಮಾರ್.ಸಿ.ಆರ್ | AE (SWD) BBMP | |
| 9 | ಶ್ರೀ.ತಿರುಮಲ ಪ್ರಸಾದ್ | BWSSB (PMC) | |
| 10 | ಶ್ರೀ. ಆನಂದ್ | AEE (BWSSB) | |
| 11 | ಶ್ರೀಮತಿ.ಸುಭಾಷಿಣಿ ಫರ್ನ್ಸ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ ಕೆ.ನಾರಾಯಣಪುರ | | |
| 12 | ಶ್ರೀಮತಿ.ಸುಭಾಷಿಣಿ ಫರ್ನ್ಸ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ ಕೆ.ನಾರಾಯಣಪುರ | – | – |
| 13 | ಶ್ರೀಮತಿ.ಸುಭಾಷಿಣಿ ಮೆನನ್ ಫರ್ನ್ಸ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ ಕೆ.ನಾರಾಯಣಪುರ | – | – |
| 14 | ಶ್ರೀ.ಡಿ.ಆರ್.ದಯಾನಂದ ದಾಸಪ್ಪ ಲೇಔಟ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:– | – | – |
| 15 | ಶ್ರೀ.ಬಿಜು.ಎಂ.ಪ್ರಸಾದ್ ಹೊರಮಾವು ಅಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:– | – | – |
| 16 | ಶ್ರೀ.ವರ್ಗೀಸ್ ಥಾಮಸ್ ಪ್ರಕೃತಿ ಲೇಔಟ್, ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:– | – | – |
| 17 | ಶ್ರೀ.ಆರುಮುಗಂ, ದಾಮೋದರನ್ ಮತ್ತು ಶ್ರೀ.ನಂಜಪ್ಪ ಸರ್.ಎಂ.ವಿ ನಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:– | – | – |
| 18 | ಶ್ರೀಮತಿ.ಶಾಂತಿ ಅರುಣಾಚಲಂ, ಆಶಾಕಿರಣ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ ರಾಮಮೂರ್ತಿ ನಗರ | – | – |

Scanned with CamScanner

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ 2021-22 ನೇ ಸಾಲಿನ ಆಯುವ್ಯಯಕ್ಕೆ ಸಂಬಂಧಿಸಿದಂತೆ ಸಲಹೆ ಸೂಚನೆಗಳನ್ನು ನೀಡಲು ಕೋರಿ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

<u>ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-</u>

<u>ಶ್ರೀಮತಿ.ಸುಜಾತ.ಎಸ್.ಪಿಳ್ಳಾಯ್ ನಂದನಂ ಕಾಲೋನಿ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ -</u> ರವರು ಮಾತನಾಡಿ ನಂದನಂ ಕಾಲೋನಿ 10ನೇ ಮುಖ್ಯರಸ್ತೆಯಲ್ಲಿ ಒಂದು ಬದಿ ಆರ್.ಸಿ.ಸಿ ಚರಂಡಿ ಮಾಡಿದ್ದು, ಮತ್ತೊಂದು ಬದಿ ಆರ್.ಸಿ.ಸಿ ಚರಂಡಿಯನ್ನು ನಿರ್ಮಾಣ ಮಾಡಲು ಮತ್ತು ಉಳಿದ 5 ಅಡ್ಡರಸ್ತೆಗಳನ್ನು ಅಭಿವೃದ್ಧಿ ಪಡಿಸಲು 2021-22 ನೇ ಸಾಲಿನ ಅಯವ್ಯಯದಲ್ಲಿ ಆಧ್ಯತೆ ಮೇರೆಗೆ ಅನುದಾನವನ್ನು ಕಾಯ್ದಿರಿಸಿ ಕಾಮಗಾರಿಯನ್ನು ಕೈಗೊಳ್ಳಲು ಕೋರಿರುತ್ತಾರೆ.

<u>ಕ್ರಮ:-</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಗೂ ಸಹಾಯಕ ಅಭಿಯಂತರರು, ಹೊರಮಾವು ರವರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

<u>ಶ್ರೀಮತಿ.ಸುಭಾಷಿಣಿ ಫರ್ನ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್ ಕೆ.ನಾರಾಯಣಪುರ -</u> ರವರು ಮಾತನಾಡಿ ನವ ಜ್ಯೋತಿ ರಸ್ತೆ(ಪರ್ನ್ ರಸ್ತೆ) ಡಾಂಬರೀಕರಣ ಕಾಮಗಾರಿಯನ್ನು ಪ್ರಾರಂಭಿಸದಿರುವ ಬಗ್ಗೆ ಕೋರಿಕೊಂಡಿದ್ದು, ಈ ಕುರಿತು ಸಹಾಯಕ ಅಭಿಯಂತರರು ಮಾತನಾಡಿ ಬೆಸ್ಕಾಂ ಇಲಾಖೆಯವರು ಓವರ್‌ಹೆಡ್ ಕೇಬಲ್‌ನ್ನು ಅಳವಡಿಸುತ್ತಿದ್ದು, ಈ ಕೇಬಲ್ ಅಳವಡಿಸಿದ ನಂತರ ಡಾಂಬರೀಕರಣ ಮಾಡುವುದಾಗಿ ತಿಳಿಸಿದ್ದು, ಬೆಸ್ಕಾಂ ಸಹಾಯಕ ಅಭಿಯಂತರರು ಮಾತನಾಡಿ 10 ದಿನಗಳ ಓಳಗಾಗಿ ಓವರ್‌ಹೆಡ್ ಕೇಬಲ್ ಅಳವಡಿಸುವ ಕಾಮಗಾರಿಯನ್ನು ಪೂರ್ಣಗೊಳಿಸಿಕೊಡುವುದಾಗಿ, ತದನಂತರ ಡಾಂಬರೀಕರಣ ಕಾಮಗಾರಿಯನ್ನು ಮಾಡಿಕೊಳ್ಳಬಹುದಾಗಿ ತಿಳಿಸಿರುತ್ತಾರೆ. ಮತ್ತು ಕೆ.ನಾರಾಯಣಪುರ ಮುಖ್ಯರಸ್ತೆಗೆ 2 ಬದಿ ಚರಂಡಿಗಳನ್ನು ನಿರ್ಮಿಸಿ ಪಾದಚಾರಿ ಮಾರ್ಗವನ್ನು ನಿರ್ಮಾಣ ಮಾಡಲು ಮತ್ತು ಹಳ್ಳಿಗಳ ವ್ಯಾಪ್ತಿಯಲ್ಲಿ ಕಾವೇರಿ ಮತ್ತು ಒಳಚರಂಡಿ ಕೊಳವೆಸಾಲುಗಳನ್ನು ಅಳವಡಿಸಿದ್ದು, ರಸ್ತೆಗಳು ತುಂಬಾ ಹಾಳಾಗಿದ್ದು, ಈ ಬಡಾವಣೆಗಳಾದ ಐಶ್ವರ್ಯ ಬಡಾವಣೆ, ಡಿಫೆನ್ಸ್ ಬಡಾವಣೆ, ಮೂರ್ತಿ ಬಡಾವಣೆ, ನವಜ್ಯೋತಿ ರಸ್ತೆಯ ಅಡ್ಡರಸ್ತೆಗಳು ಎಲ್ಲಾ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು 2021-22 ನೇ ಸಾಲಿನ ಅಯವ್ಯಯದಲ್ಲಿ ಅನುದಾನವನ್ನು ಕಾಯ್ದಿರಿಸಿ ತುರ್ತಾಗಿ ಅಬಿವೃದ್ಧಿ ಪಡಿಸಿಕೊಡಲು ಕೋರಿಕೊಂಡಿರುತ್ತಾರೆ.

<u>ಕ್ರಮ:-</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಗೂ ಸಹಾಯಕ ಅಭಿಯಂತರರು, ಹೊರಮಾವು ರವರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

<u>ಶ್ರೀ.ಡಿ.ಆರ್.ದಯಾನಂದ ದಾಸಪ್ಪ ಲೇಔಟ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-</u> ರವರು ಮಾತನಾಡಿ ದಾಸಪ್ಪ ಬಡಾವಣೆಯ 2ನೇ ಅಡ್ಡರಸ್ತೆಯಲ್ಲಿ ಶ್ರೀ.ಕ್ಯಾಪ್ಟನ್ ನಾಯ್ಡು ರವರು ಮಂಜೂರಾತಿ ನಕ್ಷೆ ಪಡೆಯದೆ ಅನಧಿಕೃತವಾಗಿ 5 ಮಹಡಿಗಳ ಕಟ್ಟಡವನ್ನು ನಿರ್ಮಿಸಿ, ಸುಮಾರು 8ಅಡಿ ಸಾರ್ವಜನಿಕ ರಸ್ತೆಯನ್ನು ಒತ್ತುವರಿ ಮಾಡಿ ರಸ್ತೆಗೆ ರ್‍ಯಾಂಪನ್ನು ಹಾಕಿ ಸಾರ್ವಜನಿಕರು ಸುಗಮವಾಗಿ ಸಂಚರಿಸಲು ತೊಂದರೆ ಮಾಡಿದ್ದು, ಇವರ ಮೇಲೆ ಕಾನೂನು ರೀತಿಯ ಕ್ರಮ ಕೈಗೊಂಡು ಒತ್ತುವರಿಯನ್ನು ತೆರೆವುಗೊಳಿಸಲು ಕ್ರಮ ಕೈಗೊಳ್ಳಲು ಮತ್ತು ದಾಸಪ್ಪ ಬಡಾವಣೆಯ 2ನೇ ಅಡ್ಡರಸ್ತೆಯಲ್ಲಿ 2 ಬದಿ ಚರಂಡಿ ಹಾಳಾಗಿದ್ದು, 2 ಬದಿ ಆರ್.ಸಿ.ಸಿ ಚರಂಡಿ ನಿರ್ಮಾಣ ಮಾಡಲು ಈಗಾಗಲೇ ಮೇ ಮಾಹೇಯಲ್ಲಿ ಮನವಿಯನ್ನು ಸಲ್ಲಿಸಿದ್ದು, ಇದುವರೆವಿಗೂ ಆರ್.ಆರ್.ಸಿ ಚರಂಡಿಯನ್ನು ನಿರ್ಮಾಣ ಮಾಡಿರುವುದಿಲ್ಲ. ಆದ್ಯತೆ ಮೇರೆಗೆ ಚರಂಡಿ ನಿರ್ಮಾಣ ಮಾಡಿಕೊಡಲು ಕೋರಿರುತ್ತಾರೆ. ಇದಕ್ಕೆ ಸಹಾಯಕ ಅಭಿಯಂತರರು ಮಾತನಾಡಿ ಯಾವುದೇ ಅನುದಾನ ಈ ಹಿಂದೆ ಲಭ್ಯವಿಲ್ಲದೇ ಇರುವುದರಿಂದ 2021-22 ನೇ ಸಾಲಿನ ಅಯವ್ಯಯದಲ್ಲಿ ಅನುದಾನವನ್ನು ಕಾಯ್ದಿರಿಸಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

<u>ಕ್ರಮ:-</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಗೂ ಸಹಾಯಕ ಅಭಿಯಂತರರು, ಹೊರಮಾವು ರವರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

<u>ಶ್ರೀ.ಬಿಜು.ಎಂ.ಪ್ರಸಾದ್ ಹೊರಮಾವು ಅಗರ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್:-</u> ರವರು ಮಾತನಾಡಿ ನ್ಯೂ ಮಿಲೇನಿಯಂ ಶಾಲೆಯ 2 ಅಡ್ಡರಸ್ತೆಗಳು, ಶಿಲ್ಪ ಬೇಕರಿಯ 2ನೇ ಅಡ್ಡರಸ್ತೆ, ಸ್ಪಂಧನ ಬಡವಣೆ ಮುಖ್ಯರಸ್ತೆ ಮತ್ತು ಜ್ಯೋತಿನಗರದ 1ನೇ ಮುಖ್ಯರಸ್ತೆಯಲ್ಲಿ ಹೊರಮಾವು ಅಗರದ ಬಂಜಾರ ಬಡಾವಣೆ, ರಾಜಣ್ಣ ಬಡಾವಣೆ, ಹೊರಮಾವು ಅಗರ ಗ್ರಾಮದ ಎಲ್ಲಾ ಬಡಾವಣೆಗಳಲ್ಲಿ ಇತ್ತೀಚಿಗೆ ಕಾವೇರಿ ಮತ್ತು ಒಳಚರಂಡಿ ಕೊಳವೆಸಾಲನ್ನು ಅಳವಡಿಸಿದ್ದು, ಸದರಿ ರಸ್ತೆಗಳನ್ನು 2021-22ನೇ ಸಾಲಿನ ಅಯವ್ಯಯದಲ್ಲಿ ಅನುದಾನವನ್ನು ಕಾಯ್ದಿರಿಸಿ ಅಭಿವೃದ್ಧಿ ಪಡಿಸಿಕೊಡಲು ಕೋರಿರುತ್ತಾರೆ.

<u>ಕ್ರಮ:-</u> ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-25 ರವರು ರಸ್ತೆಯ ಕುರಿತು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

Scanned with CamScanner

<u>ಶ್ರೀ.ವರ್ಗೀಸ್ ಥಾಮಸ್ ಪ್ರಕೃತಿ ಲೇಔಟ್, ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್:-</u> ರವರು ಮಾತನಾಡಿ ಈ ಬಡಾವಣೆಯಲ್ಲಿ ಕೆಲವು ರಸ್ತೆಗಳನ್ನು ಅಭಿವೃದ್ಧಿ ಪಡಿಸಿರುವುದಿಲ್ಲ ಮತ್ತು ಬಾಬುಸಾಪಾಳ್ಯ ಹೊರಮಾವು ಅಗರ ಮುಖ್ಯರಸ್ತೆಯಲ್ಲಿ ಹಾಲಿ ಚರಂಡಿಗಳು ಹಾಳಾಗಿದ್ದು. ಈ ಮುಖ್ಯರಸ್ತೆಯಲ್ಲಿ ಆರ್.ಸಿ.ಸಿ ಚರಂಡಿ ಮತ್ತು ಕಲ್ವರ್ಟ್‌ಗಳನ್ನು ನಿರ್ಮಾಣ ಮಾಡಲು ಮತ್ತು ಹೊರಮಾವು ವಾರ್ಡ್ ಸಂಖ್ಯೆ-25 ರಲ್ಲಿ ಸುಮಾರು 360.00ಕಿ.ಮೀ ರಸ್ತೆಗಳ ಉದ್ದವಿರುವುದಾಗಿ ತಿಳಿದುಬಂದಿದ್ದು. ದೊಡ್ಡ ವಾರ್ಡ್‌ಆಗಿದ್ದು. ಸದರಿ ವಾರ್ಡ್‌ನಲ್ಲಿ 9 ಹಳ್ಳಿಗಳನ್ನು. ಈ ಹಳ್ಳಿಗಳ ವ್ಯಾಪ್ತಿಯಲ್ಲಿ ಕಾವೇರಿ ಮತ್ತು ಒಳಚರಂಡಿ ಕೊಳವೆಸಾಲುಗಳನ್ನು ಅಳವಡಿಸಿದ್ದು. ಬಹುತೇಕ ಎಲ್ಲಾ ರಸ್ತೆಗಳು ಹಾಳಾಗಿದ್ದು. ವಾಹನಗಳು. ಸಾರ್ವಜನಿಕರು. ಮಕ್ಕಳು. ವೃದ್ಧರು ಸುಗಮವಾಗಿ ಸಂಚರಿಸಲು ತೊಂದರೆಯಾಗುತ್ತಿದ್ದು. ಮತ್ತು ದೂಳಿನಿಂದ ಅನೇಕ ಕಾಯಿಲೆಗಳು ಬರುತ್ತಿದ್ದು. ಉಳಿದ ಎಲ್ಲಾ ರಸ್ತೆಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಿಕೊಡಲು ಕೋರಿರುತ್ತಾರೆ. ಇದಕ್ಕೆ ಸಹಾಯಕ ಅಭಿಯಂತರರು ಪ್ರತಿಕ್ರಯಿಸಿ ವಾರ್ಡ್‌ನಲ್ಲಿ 360.00ಕಿ.ಮೀ ರಸ್ತೆಗಳ ಉದ್ದವಿದ್ದು. ಈಗಾಗಲೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳನ್ನು ಸುಮಾರು 140.00ಕಿಮೀ ಉದ್ದಕ್ಕೆ ಅಭಿವೃದ್ಧಿಪಡಿಸಲಾಗುತ್ತಿದ್ದು. ಉಳಿದ 220.00ಕಿ.ಮೀ ಉದ್ದಕ್ಕೆ ರಸ್ತೆಗಳ ಅಭಿವೃದ್ಧಿ ಪಡಿಸಿ ಡಾಂಬರೀಕರಣ ಮಾಡಬೇಕಾದರೆ ಅಂದಾಜು 1.00ಕಿ.ಮೀ ಗೆ ರೂ.1.00ಕೋಟಿಯಂತೆ ಸುಮಾರು ರೂ.220.00ಕೋಟಿಗಳ ಅನುದಾನದ ಅವಶ್ಯಕತೆಯಿರುತ್ತದೆ. ಆದುದರಿಂದ ಅನುದಾನದ ಲಭ್ಯತೆಗೆ ಅನುಗುಣವಾಗಿ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಿಕೊಡಲಾಗುವುದು ಎಂದು ತಿಳಿಸಿದರು. ಇದಕ್ಕೆ ಸಂಘ ಸಂಸ್ಥೆಯವರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿ ಬಿ.ಬಿ.ಎಂಪಿಯ ಹಳೇ ವಾರ್ಡ್‌ಗಳ ರಸ್ತೆಗಳನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದ್ದು. ಆ ಅನುದಾನವನ್ನು ಈ ಹಳ್ಳಿಗಳ ವ್ಯಾಪ್ತಿಗೆ ವರ್ಗಾಯಿಸಿ ಎಲ್ಲಾ ಅಡ್ಡರಸ್ತೆಗಳನ್ನು ಒಂದೇ ಬಾರಿ ಅಭಿವೃದ್ಧಿ ಪಡಿಸಿಕೊಡಲು. ಪ್ರಸ್ತಾವನೆ ಸಲ್ಲಿಸಲು ಕೋರಿಕೊಂಡಿರುತ್ತಾರೆ. ಇದಕ್ಕೆ 2021-22ನೇ ಸಾಲಿನ ಅಯವ್ಯಯದಲ್ಲಿ ಸದರಿ ಕಾಮಗಾರಿಗಳನ್ನು ಸೇರ್ಪಡೆಗೊಳಸಲು ಕ್ರಮ ಕೈಗೊಳ್ಳಲು ಸಭೆಯು ಸೂಚಿಸಿತು.

<u>ಕ್ರಮ:-</u> ಸಹಾಯಕ ಅಭಿಯಂತರರು. ವಾರ್ಡ್ ಸಂಖ್ಯೆ-25 ರವರು ಈ ಕುರಿತು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

<u>ಶ್ರೀ.ಆರ್ಮುಗಂ, ದಾಮೋದರನ್ ಮತ್ತು ಶ್ರೀ.ನಂಜಪ್ಪ ಸರ್.ಎಂ.ವಿ ನಗರ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್:-</u> ರವರು ಮಾತನಾಡಿ ಸರ್.ಎಂ.ವಿ ನಗರ 1ನೇ ಹಂತ, 4ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, 19ನೇ ಅಡ್ಡರಸ್ತೆಗಳಲ್ಲಿ ಹಾಗೂ ಉಳಿದ ಅಡ್ಡರಸ್ತೆಗಳನ್ನು ಅಭಿವೃದ್ಧಿ ಪಡಿಸಿ ಡಾಂಬರೀಕರಣ ಮಾಡಲು ಕೋರಿಕೊಂಡಿರುತ್ತಾರೆ. ಸದರಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು 2021-22ನೇ ಸಾಲಿನ ಅಯವ್ಯಯದಲ್ಲಿ ಅನುದಾನವನ್ನು ಕಾಯ್ದಿರಿಸಲು ಸಭೆಯು ಸೂಚಿಸಿತು.

<u>ಕ್ರಮ:-</u> ಸಹಾಯಕ ಅಭಿಯಂತರರು. ವಾರ್ಡ್ ಸಂಖ್ಯೆ-25 ರವರು ರಸ್ತೆಯ ಕುರಿತು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

<u>ಶ್ರೀಮತಿ.ಶಾಂತಿ ಅರುಣಾಚಲಂ, ಆಶಾಕಿರಣ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ರಾಮಮೂರ್ತಿ ನಗರ:</u>- ರವರು ಮಾತನಾಡಿ ಸದರಿ ಆಶಾಕಿರಣ ಬಡಾವಣೆಯ ಅಡ್ಡರಸ್ತೆಗಳಲ್ಲಿ ಕಾವೇರಿ ಮತ್ತು ಒಳಚರಂಡಿ ಕೊಳವೆಸಾಲುಗಳನ್ನು ಅಳವಡಿಸಿದ್ದು. ರಸ್ತೆಗಳು ಸಂಪೂರ್ಣ ಹಾಳಾಗಿದ್ದು. ಸದರಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಿ ಡಾಂಬರೀಕರಣ ಮಾಡಲು ಕೋರಿಕೊಂಡಿರುತ್ತಾರೆ. ಸದರಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು 2021-22ನೇ ಸಾಲಿನ ಅಯವ್ಯಯದಲ್ಲಿ ಅನುದಾನವನ್ನು ಕಾಯ್ದಿರಿಸಲು ಸಭೆಯು ಸೂಚಿಸಿತು.

<u>ಕ್ರಮ:-</u> ಸಹಾಯಕ ಅಭಿಯಂತರರು. ವಾರ್ಡ್ ಸಂಖ್ಯೆ-25 ರವರು ರಸ್ತೆಯ ಕುರಿತು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

ಸಭೆಯನ್ನು ಮುಕ್ತಾಯಗೊಳಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಸುತ್ತಾ. ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಸುತ್ತಾ. ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಿರಿಯ ಅಭಿಯಂತರರು
ಹೊರಮಾವು ವಾರ್ಡ್‌ನಂ.25
ಬಿ.ಬಿ.ಎಂ.ಪಿ

Scanned with CamScanner